ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

# ವಿಎಸ್‌ಕೆಯು weekly

ಸಂಪುಟ : 01 ಸಂಚಿಕೆ : 01 ದಿನಾಂಕ : ಸೆಪ್ಟೆಂಬರ್ 09 – 16, 2016.

## ಕುಲಪತಿಗಳ ಆಶಯ

**ಉ**ನ್ನತ ಶಿಕ್ಷಣವನ್ನು ಪಡೆಯಲು ದೂರದ ಪಟ್ಟಣಗಳಿಗೆ ತೆರಳಬೇಕಾದ ಅನಿವಾರ್ಯತೆಯಲ್ಲಿದ್ದ ಈ ಭಾಗದ ವಿದ್ಯಾರ್ಥಿಗಳ ಆಶಾಕಿರಣವಾಗಿ ಬಳ್ಳಾರಿಯಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು 2010ರ ಆಗಸ್ಟ್‌ನಲ್ಲಿ ಪ್ರಾರಂಭವಾಯಿತು.



ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸ ಶ್ರೀಕೃಷ್ಣದೇವರಾಯನ ಹೆಸರಿನಲ್ಲಿ ವಿಶ್ವವಿದ್ಯಾಲಯವು **'ಜ್ಞಾನ ದಾಸೋಹ'**ವನ್ನೀಯುವ ಮಹತ್ತರ ಗುರಿಯೊಂದಿಗೆ ಕಾರ್ಯಮಗ್ನವಾಗಿದೆ. ಮತ್ತೊಂದು ಮಾತು ಹೇಳುವುದಾದರೆ **"ಸ್ವದೇಶಿ ಪೂಜ್ಯತೆ ರಾಜ, ವಿದ್ವಾನ್ ಸರ್ವತ್ರ ಪೂಜ್ಯತೆ"** ಅಂದರೆ ರಾಜನಿಗೆ ತನ್ನ ರಾಜ್ಯದಲ್ಲಿ ಮಾತ್ರ ಗೌರವ ಸಿಕ್ಕರೆ, ವಿದ್ಯಾವಂತನಿಗೆ ಪ್ರಪಂಚದೆಲ್ಲೆಡೆ ಗೌರವ ದೊರೆಯುತ್ತದೆ. ಇಂತಹ ವಿದ್ಯಾರ್ಥಿಗಳನ್ನು ಸೃಷ್ಟಿಸುವಲ್ಲಿ ವಿಶ್ವವಿದ್ಯಾಲಯ ದಾಪುಗಾಲಿಡುತ್ತಿದ್ದು, ಇದಕ್ಕಾಗಿ ಈಗಾಗಲೇ ಮುಖ್ಯಆವರಣ, ಕೊಪ್ಪಳ ಮತ್ತು ನಂದಿಹಳ್ಳಿ ಒಳಗೊಂಡು ಮೂರು ಪಿಜಿ ಸೆಂಟರ್‌ಗಳನ್ನು ಕಾರ್ಯಪ್ರವೃತ್ತಗೊಳಿಸಿದೆ.

ಜ್ಞಾನ ಸಾಗರ (ಬಳ್ಳಾರಿ) ಕ್ಯಾಂಪಸ್‌ನಲ್ಲಿ 24, ನಂದಿಹಳ್ಳಿಯ ಜ್ಞಾನ ಸರೋವರ ಕ್ಯಾಂಪಸ್‌ನಲ್ಲಿ 10, ಕೊಪ್ಪಳ ಕ್ಯಾಂಪಸ್‌ನಲ್ಲಿ 6 ಕೋರ್ಸ್‌ಗಳು ಸೇರಿದಂತೆ ಒಟ್ಟು 25ಕ್ಕೂ ಅಧಿಕ ವಿಭಾಗಗಳನ್ನು ವಿವಿ ಮುನ್ನಡೆಸುತ್ತಿದೆ. ವಿ.ವಿ. ವ್ಯಾಪ್ತಿಯಲ್ಲಿ ನೂರಕ್ಕೂ ಅಧಿಕ ಸಂಶೋಧನಾರ್ಥಿಗಳು ಸೇರಿದಂತೆ 2500ಕ್ಕೂ ಅಧಿಕ ಸ್ನಾತಕೋತರ ವಿದ್ಯಾರ್ಥಿಗಳು ಹಾಗೂ 40,000 ಪದವಿ ವಿದ್ಯಾರ್ಥಿಗಳು ಜ್ಞಾನಾರ್ಜನೆಯಲ್ಲಿ ನಿರತರಾಗಿದ್ದಾರೆ.

ಮುಂದಿನ ದಿನಗಳಲ್ಲಿ ಈ ಸಂಖ್ಯೆಯನ್ನು 10 ಸಾವಿರಕ್ಕೆ ತಲುಪಿಸಿ, ಹೈದರಬಾದ್–ಕರ್ನಾಟಕ ಭಾಗದ ಶೈಕ್ಷಣಿಕ ಸ್ಥಿತಿಗತಿಯನ್ನು ಉಚ್ಛ್ರಾಯ ಮಟ್ಟಕ್ಕೆ ಕೊಂಡಯ್ಯುವ ಗುರಿಯೊಂದಿಗೆ ಶ್ರಮಿಸುತ್ತಿದ್ದೇವೆ.

ಉನ್ನತ ಶಿಕ್ಷಣವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಇರಾದೆಯಲ್ಲಿರುವ ವಿಶ್ವವಿದ್ಯಾಲಯವು ಪ್ರಸಕ್ತ ಸಾಲಿನಲ್ಲಿ ಕೆಲವೊಂದು ಹೊಸ ವಿಭಾಗಗಳನ್ನು ಆರಂಭಿಸಿದ್ದು, ಅವುಗಳಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಒಂದು. ವಿಭಾಗದ ಪ್ರಾಯೋಗಿಕ ಕಲಿಕಾ ಅಗತ್ಯಗಳಿಗಾಗಿ ಪತ್ರಿಕೆಯೊಂದನ್ನು ಹೊರತರಬೇಕಾಗಿತ್ತು, ಆದರೆ ಪತ್ರಿಕೆಯನ್ನು ಕೇವಲ ವಿಭಾಗಕ್ಕೆ ಸೀಮಿತಗೊಳಿಸದೇ ಕ್ಯಾಂಪಸ್ ವ್ಯಾಪ್ತಿಯ ಪತ್ರಿಕೆಯನ್ನಾಗಿಸುವ ಹಾಗೂ ವಿವಿಯ ಜ್ಞಾನ ದಾಸೋಹದ ಸುಧೀರ್ಘ ಹಾದಿಯೊಂದಿಗೆ ಕೈಜೋಡಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. **ವಿಎಸ್‌ಕೆಯು** *weekly* ಎಂಬ ಹೆಸರಿನೊಂದಿಗೆ ಇದೇ ಸೆಪ್ಟೆಂಬರ್‌ನಿಂದ ಪತ್ರಿಕೆ ಪ್ರಕಟಗೊಳ್ಳುತ್ತದೆ.

ಜ್ಞಾನಸಾಗರ ಆವರಣದಲ್ಲಿನ ಕಾರ್ಯಕ್ರಮಗಳು, ವಿವಿಧ ವಿಭಾಗಗಳ ಶೈಕ್ಷಣಿಕ ಚಟುವಟಿಕೆಗಳು, ವಿದ್ಯಾರ್ಥಿಗಳ ಸಾಧನೆ ಮತ್ತು ಕುಂದುಕೊರತೆಗಳಿಗೆ ವರದಿಗಳ ಮೂಲಕ ಇಲ್ಲಿನ ಆಗುಹೋಗುಗಳಿಗೆ ಕನ್ನಡಿಯಾಗುವ ಚಿಕ್ಕ ಪ್ರಯತ್ನವನ್ನು ಪತ್ರಿಕೆ ಮಾಡಲಿದೆ ಹಾಗೂ ಈ ಸಲುವಾಗಿ ಒದುಗರೆಲ್ಲರ ಸಹಕಾರವನ್ನು ವಿಭಾಗ ಮತ್ತು ಪತ್ರಿಕೆ ನಿರೀಕ್ಷಿಸುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳ ಅಭ್ಯುಧಯದ ಗುರಿಯೊಂದಿಗೆ ಉದ್ಯೋಗ ಮಾಹಿತಿ ಮತ್ತು ಇತರೆ ಪೂರಕ ವಿಷಯಗಳ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಪತ್ರಿಕೆ ಶ್ರಮಿಸುವ ಭರವಸೆಯಿದೆ.

ವಿವಿಯ ಘಟನಾವಳಿಗಳನ್ನು ದಾಖಲಿಸುವ ಈ ಮಹತ್ತರ ಕಾರ್ಯಕ್ಕೆ ವಿಶ್ವವಿದ್ಯಾಲಯದ ಸಹಕಾರ ಸದಾ ಪತ್ರಿಕೆಗೆ ಲಭ್ಯವಿರುತ್ತದೆ ಎಂದು ತಿಳಿಸುತ್ತಾ ಪತ್ರಿಕೆ ಯಶಸ್ವಿಯಾಗಿ ಮುನ್ನಡೆಯಲೆಂದು ವಿವಿಯ ಪರವಾಗಿ ಶುಭ ಹಾರೈಸುತ್ತೇನೆ.

**ಪ್ರೊ. ಎಂ. ಎಸ್. ಸುಭಾಷ್**
**ಕುಲಪತಿಗಳು**

## ವಿಶ್ವವಿದ್ಯಾಲಯದಲ್ಲಿ ಶ್ರೀಕೃಷ್ಣದೇವರಾಯ!

**ಬಳ್ಳಾರಿ, ಸೆ. 16:** ವಿಶ್ವವಿದ್ಯಾಲಯದ ಜ್ಞಾನ ಸಾಗರ ಆವರಣದಲ್ಲಿನ ಪರೀಕ್ಷಾಂಗ ಕಟ್ಟಡದ ಮುಂಭಾಗದಲ್ಲಿ ಚಿನ್ನದ ಹೊಳಪಿನ ವಿಶಿಷ್ಟ ಪ್ರತಿಮೆಯೊಂದು ವಿರಾಜಮಾನವಾಗಿದೆ.

ಹೌದು, 16ನೇ ಶತಮಾನದಲ್ಲಿನ ಇಸವಿ 1509 ರಿಂದ 1530 ರವರೆಗೂ ವಿಜಯನಗರ ಸಾಮ್ರಾಜ್ಯವನ್ನು ಸುಭಿಕ್ಷವಾಗಿ ಮುನ್ನಡೆಸಿದ್ದ, ವಿಶ್ವಭೂಪಟದಲ್ಲಿ ಈ ಭಾಗಕ್ಕೆ ಐತಿಹಾಸಿಕ ಮನ್ನಣೆ ದೊರೆಯಲು ಕಾರಣಕರ್ತನಾದ ಪ್ರಖ್ಯಾತ ಅರಸ, ಕನ್ನಡ ರಾಜ್ಯ ರಾಮರಮಣ, ಆಂಧ್ರಬೋಜನೆಂಬ ಬಿರುದಾಂಕಿತ ಶ್ರೀಕೃಷ್ಣದೇವರಾಯನ ಗೌರವಾರ್ಥವಾಗಿ ಆತನ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ.

ಪ್ರತಿಮೆಯನ್ನು ಆಂಧ್ರಪ್ರದೇಶದ ಕೃಷ್ಣ ಜಿಲ್ಲೆಯ ಗೊಲ್ಲಪುಡಿ ಪಟ್ಟಣದ ಶ್ರೀ ಸಾಯಿಬಾಬಾ ಮೇಘ ಶಿಲ್ಪಕಲಾ ಸಂಸ್ಥೆಯ ಖ್ಯಾತ ಶಿಲ್ಪಕಲಾಕಾರರಾದ ಬಿ. ಶಿವವರ ಪ್ರಸಾದ್ ಅವರು ನಿರ್ಮಿಸಿದ್ದಾರೆ. ಇವರು ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿನ ವಿವಿಧ ಪ್ರತಿಮೆಗಳನ್ನು ನಿರ್ಮಿಸಿರುವ ಪ್ರಸಿದ್ಧಿ ಹೊಂದಿದ್ದಾರೆ. ಪುತ್ಥಳಿಯು ಕಂಚಿನದ್ದಾಗಿದ್ದರೂ, ಮೇಲ್ಮೈಕವಚಕ್ಕೆ ಬಂಗಾರ ವರ್ಣದ ಲೇಪನ ನೀಡಲಾಗಿದೆ ಎಂದು ಶಿವವರ ಪ್ರಸಾದ್ **ವಿಎಸ್‌ಕೆಯು ವೀಕ್ಲೀ**ಗೆ ತಿಳಿಸಿದ್ದಾರೆ.



**ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಷ್ಠಾಪಿಸಲಾಗಿರುವ ಶ್ರೀಕೃಷ್ಣದೇವರಾಯನ ಕಂಚಿನ ಪ್ರತಿಮೆ**

ಪುತ್ಥಳಿಯು ಆರು ಅಡಿ ಎತ್ತರ ಹಾಗೂ ಎರಡು ಅಡಿಯ ಪೀಠವನ್ನು ಹೊಂದಿದೆ. ಪ್ರತಿಷ್ಠಾನೆಯ ನಂತರ ಪ್ರತಿಮೆಯ ಎತ್ತರವು ಏಳು ಅಡಿ ಎರಡು ಇಂಚು ಆಗಿದೆ. ಒಂದು ಸಾವಿರ ಕೆ.ಜಿ. ತೂಕವಿರುವ ಪ್ರತಿಮೆಯ ಯೋಜನಾ ವೆಚ್ಚವನ್ನು 8.00 ಲಕ್ಷ ರೂ. ಗಳೆಂದು ಅಂದಾಜಿಸಲಾಗಿತ್ತು. ಆದರೆ ಅಂತಿಮವಾಗಿ 6.98 ಲಕ್ಷ ರೂ.ಗಳು ವೆಚ್ಚವಾಗಿದೆ ಎಂದು ವಿವಿ ತಿಳಿಸಿದೆ.

ವಿಶ್ವವಿದ್ಯಾಲಯದ 7ನೇ ಸಂಸ್ಥಾಪನ ದಿನಾಚರಣೆಯ ಅಂಗವಾಗಿ ಆಗಸ್ಟ್ 16 ರಂದು ಜ್ಞಾನಸಾಗರ ಆವರಣದಲ್ಲಿ ಆಯೋಜಿಸಿದ್ದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮದ ಭಾಗವಾಗಿ ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿ ಅವರು ಶ್ರೀಕೃಷ್ಣದೇವರಾಯನ ಪುತ್ಥಳಿಯನ್ನು ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಲಾಡ್, ಸಂಸದ ಬಿ. ಶ್ರೀರಾಮುಲು, ಕುಲಪತಿಗಳಾದ ಪ್ರೊ. ಎಮ್. ಎಸ್. ಸುಭಾಶ್, ಕುಲಸಚಿವರಾದ ಪ್ರೊ. ಟಿ. ಎಮ್. ಭಾಸ್ಕರ್ ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

– **ರಾಘವೇಂದ್ರ**

## ದೊಡ್ಡಾಟ ಕಲೆಗೆ ಪ್ರೋತ್ಸಾಹ ಅಗತ್ಯ: ನಾಡೋಜ ವೀರಣ್ಣ

**ಬಳ್ಳಾರಿ, ಸೆ. 16:** ಅವನತಿಯ ಹಂತದಲ್ಲಿರುವ ರಂಗಕಲೆಯಾದ ದೊಡ್ಡಾಟಕ್ಕೆ ಪ್ರೋತ್ಸಾಹ ನೀಡುವ ಮೂಲಕ ನಮ್ಮ ನೆಲದ (ಸ್ಥಳೀಯ) ಸಂಸ್ಕೃತಿಯನ್ನು ಉಳಿಸೋಣ ಎಂದು ನಾಡೋಜ ಬೆಳಗಲ್ಲು ವೀರಣ್ಣ ಕರೆ ಕೊಟ್ಟರು.



**ವಿಎಸ್‌ಕೆ ವಿವಿಯಲ್ಲಿ ನಡೆದ ದೊಡ್ಡಾಟ ಕಲಿಕಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ನಾಡೋಜ ಬೆಳಗಲ್ ವೀರಣ್ಣ, ವಿವಿಯ ಕುಲಸಚಿವರಾದ ಪ್ರೊ. ಟಿ. ಎಂ. ಭಾಸ್ಕರ್, ಕಲಾ ನಿಕಾಯದ ಮುಖ್ಯಸ್ಥ ಡಾ. ಶಾಂತನಾಯ್ಕ ಹಾಗೂ ಮತ್ತಿತತರರು.**

ನಗರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಹೊಸ ಸಭಾಂಗಣದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು ಮತ್ತು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಆಗಸ್ಟ್ 22ರಂದು ಹಮ್ಮಿಕೊಂಡಿದ್ದ ದೊಡ್ಡಾಟ ಕಲಿಕಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಯಕ್ಷಗಾನಕ್ಕೆ ಬಹುದೊಡ್ಡ ಮಟ್ಟದಲ್ಲಿ ಪ್ರೋತ್ಸಾಹ ದೊರೆಯುತ್ತಿದ್ದು, ವಿಶ್ವವಿಖ್ಯಾತಿಯನ್ನು ಪಡೆದಿದೆ. ಅದರಂತೆ ದೊಡ್ಡಾಟಕ್ಕೂ ಪ್ರೋತ್ಸಾಹ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ವಿದ್ವಾಂಸರು, ರಾಜಕಾರಣಿಗಳು, ಉದ್ಯಮಿಗಳು ದೊಡ್ಡಾಟದ ಕಡೆ ಆಸಕ್ತಿ ತೋರುವ ಮೂಲಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ನೆರವು ನೀಡಬೇಕು ಎಂದು ಸಲಹೆಯಿತ್ತರು. ದೊಡ್ಡಾಟ, ಗೊಂಬೆಯಾಟದಲ್ಲಿ ಪದವಿಧರರು ಸಾಧನೆ ಮಾಡುವ ಅವಶ್ಯಕತೆ ಇದೆ.

ಮಾನಸಿಕ ಸದೃಡತೆಗಾಗಿ ಕಲೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ವಿದ್ಯಾರ್ಥಿಗಳು ಆಸಕ್ತಿ ವಹಿಸುವ ಮೂಲಕ ಸಾಧನೆಯ ಪಣ ತೊಡಬೇಕು ಎಂಬ ಮಾರ್ಗದರ್ಶಿ ಮಾತುಗಳನ್ನಾಡಿದರು.

ಕಾರ್ಯಕ್ರಮದ ಆಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ. ಟಿ. ಎಂ. ಭಾಸ್ಕರ್ ಅವರು ಮಾತನಾಡಿ, ನಾವು ಧಾರವಾಹಿಗಳ ಹಾವಳಿಯಿಂದ ಮತ್ತೆ ಜನಪದ ಕಲೆಗಳಿಗೆ ಮರಳೋಣ. ರಾಗ–ದ್ವೇಷಗಳನ್ನು ಶಮನ ಮಾಡಿ ನಮ್ಮಲ್ಲಿ ತಾಳ್ಮೆ, ಶಿಸ್ತು, ಸಂಯಮ, ಸಜ್ಜನಿಕೆಗಳಂತಹ ಮೌಲ್ಯಗಳನ್ನು ರೂಢಿಸಿಕೊಂಡಾಗ ಮಾತ್ರ ಕಲೆಯಲ್ಲಿ ಮಹತ್ತರವಾದುದನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ವಿವಿಯ ಕಲಾ ನಿಕಾಯದ ಮುಖ್ಯಸ್ಥ ಡಾ. ಶಾಂತನಾಯ್ಕ ಅವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಇಂಗ್ಲೀಷ್ ವಿಭಾಗದ ವಿದ್ಯಾರ್ಥಿನಿ ಕವಿತಾ ನಿರೂಪಿಸಿದರು. ಡಾ. ಗಿರೇಗೌಡ ವಂದಿಸಿದರು.

– **ಪದ್ಮಾವತಿ**

## ಪಿ.ಡಿ.ಓ. ಹುದ್ದೆಗಳಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಸೆ. 14:** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ) ಮತ್ತು ಕಾರ್ಯದರ್ಶಿ ಗ್ರೇಡ್ 1 ಖಾಲಿ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಸರ್ಕಾರವು ಅಧಿಸೂಚನೆ ಹೊರಡಿಸಿದೆ.

ಅಧಿಸೂಚನೆಯಲ್ಲಿ ಒಟ್ಟು 1624 ಹುದ್ದೆಗಳಿದ್ದು, 815 ಪಿ.ಡಿ.ಓ. ಮತ್ತು 809 ಗ್ರಾ.ಪಂ. ಕಾರ್ಯದರ್ಶಿ ಹುದ್ದೆಗಳೆಂದು ವಿಂಗಡಿಸಲಾಗಿದೆ. ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಅಥವಾ ತತ್ಸಮಾನ ಶಿಕ್ಷಣ ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಈವರೆಗೂ ಕೆಪಿಎಸ್‌ಸಿಯು ನೇಮಕಾತಿ ನಡೆಸುತ್ತಿತ್ತು. ಆದರೆ ಅಲ್ಲಿನ ಕೆಲವು ವಿವಾದಗಳು ಹಾಗೂ ವಿಳಂಬ ನೀತಿಯ ಪರಿಣಾಮವಾಗಿ ಈ ಬಾರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ)ಕ್ಕೆ ನೇಮಕಾತಿ ಹೊಣೆ ವರ್ಗಾವಣೆಗೊಂಡಿರುವುದು ವಿಶೇಷ.

ಆಸಕ್ತ ಅಭ್ಯರ್ಥಿಗಳು ಎರಡೂ ಹುದ್ದೆಗಳಿಗೆ ಸೂಚಿತ ಶುಲ್ಕ ಭರಿಸಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಅಕ್ಟೋಬರ್ 15 ಕಡೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ http://kea.kar.nic.in ಸಂಪರ್ಕಿಸಬಹುದು.

**ವಿದ್ಯಾರ್ಥಿ ಸಂಪಾದಕರು:** ಪದ್ಮಾವತಿ, ಲತಾ ವಿ, ರಾಘವೇಂದ್ರ, ಗುರುಬಸವರಾಜ್ ಉಳ್ಳಾಗಡ್ಡಿ. **ಮಾರ್ಗದರ್ಶಕರು :** ವಿನಯ್ ಜಿ. ಪಿ.